# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ, ಹೊಸನಗರ
## ಸಿ.ಸಿ. ನಂ. 1158/2023

**ಚಾಸಾ-8 ಪ್ರಾಸಾ-8**

| | | |
|---|---|---|
| ಹೆಸರು | – | ಡಿ.ಹೆಚ್ ಮೀರಾಬಾಯಿ |
| ಗಂಡನ ಹೆಸರು | – | ಶಾಂತರಾಮ |
| ವಯಸ್ಸು | – | 52 ವರ್ಷ |
| ವೃತ್ತಿ | – | ಎ.ಎಸ್.ಐ |
| ವಾಸಸ್ಥಳ | – | ಸಾಗರ. |

(ದಿನಾಂಕಃ **10.04.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು 2022 ರಿಂದ ಮೇ 2023 ರವರೆಗೆ ಎ.ಎಸ್.ಐ ಆಗಿ ಹೊಸನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 04.02.2023 ರಂದು ಬೆಳಗ್ಗೆ 8.15 ರ ಸಮಯದಲ್ಲಿ ನಾನು ಹೊಸನಗರ ಠಾಣೆ ದಿನಚರಿ ಪ್ರಭಾರದಲ್ಲಿ ಇದ್ದಾಗ ಚಾಸ 1 ರವರು ನಮ್ಮ ಠಾಣೆಗೆ ಬಂದು ನೀಡಿದ ಲಿಖಿತ ದೂರು ನನ್ನ ಮುಂದೆ ಸಲ್ಲಿಸಿದ್ದು ಅದನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ1 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು.

3. ನಾನು ಚಾಸ 1 ರವರು ನೀಡಿದ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ಠಾಣಾ ಗುನ್ನಾ ನಂಬರ್ 11/2023 ರಂತೆ ಐಪಿಸಿ ಕಲಂ 457, 380, 511 ರ ಅಡಿಯಲ್ಲಿ ದಾಖಲಿಸಿ ಅದರ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ5 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ5(ಎ) ಎಂದು ಗುರುತಿಸಲಾಯಿತು.

4. ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸ 9 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಎಂ.ಎಲ್ ರವರಿಂದ ಶ್ರೀ ಸಿ.ಹೆಚ್ ರವರ ಪರವಾಗಿ**

1. ಚಾಸ 1 ರವರು ನನ್ನ ಸಮಕ್ಷಮ ದೂರನ್ನು ಬರೆದಿರುವುದಿಲ್ಲ ಮೊದಲೇ ಬರೆದುಕೊಂಡಿರುತ್ತಾರೆ. ದೂರನ್ನು ನೀಡಲು ನಮ್ಮ ಠಾಣೆಗೆ ಚಾಸ 1 ರವರ ಜೊತೆ ಯಾರು ಬಂದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ನನಗೆ ಹೇಳಲು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಚಾಸ 1 ರವರು ದೂರನ್ನು ನಮ್ಮ ಠಾಣೆಗೆ ತಂದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.